ಶ್ರೀ ದೇವೇಂದ್ರಪ್ಪ ಫಾಳಪ್ಪ —ಅದಂ ತರಿ ಭೂಮಿ ಇರಲಿ, ಖುಷ್ಕಿ ಭೂಮಿ ಇರಲಿ, ಯಾವುದೇ ಭೂಮಿ ಇರಲಿ, ಎ. ಬಿ. ಸಿ. ಡಿ. ಎಂದು ಕ್ಲಾಸಸ್ ಮಾಡಿದೆ ಮೊನ್ನ ಸದಸ್ಯರಿಗೆ ಗೊತ್ತಿರುವ ಹಾಗೆ ಡಿಸೆಂಬರ್ ತಿಂಗಳೊಳಗೆ ಸರ್ಪ್ಲಸ್ ಲ್ಯಾಂಡನ್ನು ತೆಗೆದುಕೊಂಡು ಹಂಚಬೇಕು ಎಂದು ಮಾಡಿದ್ದೇವೆ. ಇದಂ 1974ನೇ ಇಸವಿಯಲ್ಲಿ ಕಳಿಸಿದಂಥ ಪ್ರಶ್ನೆ. ಈಗ ಏನಾಗಿದೆ ಎಂದು ಹೇಳಲಿಕ್ಕೆ ಸಾಧ್ಯವಿಲ್ಲ. ಮಾನ್ಯ ಸದಸ್ಯರಿಗೆ ಸಂಶಯವಿದ್ದಲ್ಲಿ ಆಂಥಾದ್ದನ್ನು ಸರ್ಕಾರದ ಗಮನಕ್ಕೆ ತಂದರೆ ಕಾನೂನು ಪ್ರಕಾರ ಇತ್ಯರ್ಥ ಮಾಡಲಿಕ್ಕೆ ಆಜ್ಞೆ ಮಾಡುತ್ತೇನೆ.

SRI DODDATHIMMAIAH.—Will the Government take care to see that big landlords like Sri G. R. Naik who are nominated to the Tribunal act in such a way that it does not defeat the very object of the Tribunal ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಹೆಚ್ಚುವರಿ ಭೂಮಿ ಇರತಕ್ಕ ಸದಸ್ಯರು ಇದರಲ್ಲಿ ಇದ್ದರೂ ಕೂಡ ಯಾವ ವಿಧವಾದಂಥ ಅನಾಹುತವಾಗುವುದಿಲ್ಲ ಎಂದು ನನ್ನ ಅಭಿಪ್ರಾಯ.

ಶ್ರೀ ಜೆ. ಎಲ್. ಕಬಾಡೆ.—ಈಗ ಹೆಚ್ಚಿನ ಭೂ ಹಿಡುವಳಿ ಹೊಂದಿರತಕ್ಕ ಸದಸ್ಯರು ಇಂಡಿ ತಾಲ್ಲೂಕಿನ ಭೂ ನ್ಯಾಯಮಂಡಲಿಯಲ್ಲಿದ್ದಾರೆ, ಅವರ ಹೆಸರು ಸಿಲ್ಲಾರಿ ಅರ್ಜುನ ಮಿಸಾಳೆ ಎಂದು. ಅವರು ರೈತರಿಗೆ ಮಾಲಿಷ್ ಮಾಡಿ ರೈತರ ಜಮೀನನ್ನು ತೆಗೆದುಕೊಂಡೆಂ ತಾವೇ ಹಿಡುವಳಿ ಮಾಡತಕ್ಕಂಥ ಕಾಗದ ಪತ್ರಗಳನ್ನು ತಯಾರು ಮಾಡಿ ರೈತರಿಗೆ ಅನ್ಯಾಯ ಮಾಡಿದ್ದಾರೆ. ಇದರ ಬಗ್ಗೆ ಎಷ್ಟೋ ದೂರುಗಳು ಸೆಂಟ್ರಲ್ ಗವರ್ನಮೆಂಟ್‌ಗೂ ಹಾಗೂ ರಾಜ್ಯ ಸರ್ಕಾರಕ್ಕೂ ಬಂದಿದೆ. ಆದರ ಬಗ್ಗೆ ತಾವು ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ದೇವೆಂದ್ರಪ್ಪ ಫಾಳಪ್ಪ.—ಈ ಸದಸ್ಯರು ಬಗ್ಗೆ ದೂರುಗಳು ಬಂದಿವೆ. ಯಾವತೀ ಆದನ್ನು ಇತ್ಯರ್ಥ ಮಾಡಬೇಕು ಎಂದು ಸರ್ಕಾರ ಜಾಗ್ರತೆ ಪರಿಶೀಲನೆ ಮಾಡುತ್ತದೆ ; ಮಾಡಿದ ಮೇಲೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು : ಇಲ್ಲಿಗೆ ಪ್ರಶ್ನೆಗಳು ಮುಗಿದವು.

KARNATAKA IMPROVEMENT BOARDS (AMENDMENT) BILL 1976

INTRODUCTION

SRI D. K. NAIKAR (Minister for Municipal Administration and Political Pensions).—I beg to move—

"That leave be granted to introduce the Karnataka Improvement Boards (Amendment) Bill, 1976.

MADAM SPEAKER.—The question is :

"That leave be granted to introduce the Karnataka Improvement Boards (Amendment) Bill, 1976."

The motion was adopted and leave was granted.

SRI D. K. NAIKAR.—I introduce the Bill.

MADAM SPEAKER.—The Bill is introduced.**

** Bill appended as Annexure to this volume.

Statement by the Minister for Industries and Parliamentary Affairs KSRTC Bus Accident at Srirampura, Bangalore

SRI S. M. KRISHNA (Minister for Industries and Parliamentary Affairs I beg your leave to make a short statement about an accident which has taken place this morning.

A BTS contract bus carrying NGEF employees to the factory met with an accident this morning on 5th cross Road, Malleswaram, when the bus ploughed into the nallah a little beyond Geethanjali talkies. As a result of the accident about 40 employees travelling in he bus were injured. On hearing the report, Senior Officers of NGEF including the Deputy General Manager, Personnel Manager Secretary, Employees' Relations officer and others rushed to the spot immediately and made necessary arrangements for first-aid at the nearby K. C. General Hospital, Malleswaram.

Shri H.G.V. Reddy, Chairman and Managing Director of NGEF Ltd., also followed and rushed to the spot immediately after he came to know about the accident and visited the K.C. General Hospital, Malleswaram, the E.S.I. Hospital and the Victoria Hospital where the injured were being treated.

Shri N. Muniappa, aged 32 years died of head injuries after he was taken to the Mental Hospital for emergency treatment. There are three others in the Mental Hospital in a serious condition. Another employee Shri Desikachar is in a critical condition at the E.S.I. Hospital, Rajajinagar. The doctors in attendance and other hospital staff are doing their best in all the hospitals to help the injured Senior Officers and officials of NGEF are also on the spot giving assistance to the injured and the families

Shri H.G.V. Reddy, Chairman, announced on the spot an ex-gratia payment of Rs. 500 per head to all those who were injured. He also added that they would be given full pay during the period of treatment condoning their absence. He announced further that the bereaved families will be paid an immediate ex-gratia payment of Rs. 1000 for each deceased employee in addition to other benefits and payments and further added that one of the children or immediate next kith or kin of the deceased will be given employment in the factory dispensing with all formalities to redress hardship to the families concerned.

I have also visited the scene of the accidents and also called on the injured in the Victoria Hospital as well as in ESI Hospital in Rajajinagr. All that is possible is being done to minimise the hardship for these unfortunate and innocent workers that have been exposed.

MENTAL HOSPITAL : (1) Total admitted ... 4
(2) Expired ... 1
(3) Serious ... 1
(4) Improving 2

Sl No	Name & Designation	Date of birth & Age	Name of the father	Address	Remarks
1.	Sri N. Muniyappa Semi-skilled Worker	15-11-44 32 years	Sri Narasimhaiah	IInd Main Road, 8th Cross Gayatri Nagar Bangalore-560021	DEAD
2.	Sri M. Rama Murthy Semi-skilled worker	20-12-49 29 years	Sri R. Muniswamy	No. 54 A/4, IInd Main Road Prakash Nagar, Bangalore-560021	SERIOUS
3.	Sri Mariyappa, H, Skilled Worker	8-2-40 36 years	Sri Narasaiah	Door No. 33/47, Ambabhavani Road, Mariyappana Palya Bangalore-560021	IMPROVING
4.	Sri. S. Ganeshan Skilled Worker	12-1-46 30 years	Sri V. Subramanya Reddy	No. 42, 9th Cross, Gajendra Nilayam, Gayathri Nagar Srirampuram Post Bangalore-560021	do

VICTORIA HOSPITAL : (1) Total admitted ... 20
(2) Suspected head injuries ... 2
(3) Fractured ... 8
(4) Other injuries ... 10

1.	Sri M. A. Krishnamurthy Commercial Supervisor	10-1-40 36 years	Sri S. Anandathirtha char	No. 107, IIIrd Main, 9th Cross, Prakash Nagar Bangalore-560021	SUSPECTED HEAD INJURY
2.	Sri M. Hanumanthayappa Skilled Worker	4-5-42 34 years	Sri Mariappa	No. 1816-C, IIIrd Stage Prakash Nagar Bangalore-560021	do

---

E S.I. HOSPITAL : (1) Total admitted—16, (2) Serious 1, (3) Other injuries—15

1.	Sri K. C. Desikachar Senior Asst.	15-1-37 39 years	Sri K.R. Gopalachar	No. 73 (E), Mariyappanahalli Sreerampuram, Bangalore-560021	SERIOUS

† ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಮಾನ್ಯ ಮಂತ್ರಿಗಳಾದ ಶ್ರೀ ಕೃಷ್ಣ ಅವರು ಈಗ ಒಂದು ಹೇಳಿಕೆ ಕೊಟ್ಟಿದ್ದು ನೋಡಿದರೆ ಒಂದು ವಿಚಾರದಲ್ಲಿ ಸಂತೋಷ. ಆದೇನೆಂದರೆ ತಕ್ಷಣವೇ ಮಂತ್ರಿಗಳು ಹೋಗಿ ಅಲ್ಲಿ ಅದಂಥ ಅಪಾಯ ಪರಿಸ್ಥಿತಿಯನ್ನು ನೋಡಿ ಬಂದಿರುವುದು. ನಾನೂ ಕೂಡ ಆಲ್ಲಿಗೆ ಹೋಗಿದ್ದೆ. ಯಾರ್ಯಾರು ಆಸ್ಪತ್ರೆಗಳಲ್ಲಿದ್ದಾರೆಯೋ ಮತ್ತು ಯಾರ್ಯಾರು ನಿಧನರಾಗಿದ್ದಾರೋ ಅಂತಹವರಿಗೆ ಒಂದು ರೀತಿಯಲ್ಲಿ ಪರಿಹಾರವನ್ನು ಕೊಡಬೇಕೆಂದು ಈಗಾಗಲೇ ಘೋಷಣೆ ಮಾಡಿರುವುದು ಬಹು ಮುಖ್ಯವಾದ ಪ್ರಶ್ನೆ. ಆದರೆ ಈಗ ಕೊಟ್ಟಿರುವ ಪರಿಹಾರವನ್ನು ಇನ್ನೂ ಸೆಚ್ಚಿಗೆ ಕೊಡುವುದಕ್ಕೆ ಸಾಧ್ಯವೇ ಎಂಬುದನ್ನು ಸರ್ಕಾರ ಪರಿಶೀಲನೆ ಮಾಡುವುದು ಯೋಗ್ಯ. ಏಕೆಂದರೆ, ನನಗೆ ತಿಳಿದಮಟ್ಟಿಗೆ ಕೆಲವು ಕಾರ್ಖಾನೆಗಳಲ್ಲಿ ನಾವು ಪರಿಹಾರ ನಿಧಿ ಎಂಬುದಾಗಿ ಇದೆ. ಆದರೆ ಈ ಒಂದು ಕಾರ್ಖಾನೆಯಲ್ಲಿ ಅಂತಹ ನಿಧಿ ಏನೂ ಇಲ್ಲವೆಂದು ತೋರುತ್ತದೆ, ಅಂತಹ ನಿಧಿ ಇರುವ ಹಾಗೆಯೂ ನನಗೆ ಕಾಣಲಿಲ್ಲ. ಆದರಿಂದಾಗಿ ಕೆಲವು ಕಾರ್ಖಾನೆಗಳಲ್ಲಿ ಅಂದರೆ ಸಾರ್ವಾತ್ಯವಾಗಿ ಎಚ್.ಎಂ.ಟಿ.ಯಲ್ಲಿ ಇಂತಹ ಅಪಘಾತ ಸಂಭವಿಸಿದಲ್ಲಿ ಆ ರೀತಿ ನಿಧನರಾದಂತಹವರಿಗೆ ಒಬ್ಬೊಬ್ಬರಿಗೂ 10 ಸಾವಿರ ರೂಪಾಯಿಗಳನ್ನು ಅವರ ಫಂಡಿನಿಂದ ಕೊಡುತ್ತಾರೆಂದು ನಾನು ಕೇಳಿದ್ದೇನೆ. ಇಂತಹ ಒಂದು ಸಂದರ್ಭದಲ್ಲಿಯೂ ಕೂಡ ಅದೇ ರೀತಿಯಲ್ಲಿ ಹೆಚ್ಚಿಗೆ ಪರಿಹಾರವನ್ನು ಕೊಡುವುದು ಒಳ್ಳೆಯದು. ಅದರ ಬಗ್ಗೆ ಸರ್ಕಾರ ಹೇಗೆ ಮಾಡಬೇಕೆಂಬುದನ್ನು ಯೋಚನೆ ಮಾಡುವ ಹೊಣೆಯನ್ನು ಅವರಿಗೆ ಬಿಡೋಣ, ಆದರೆ ಯಾರ್ಯಾರು ಈ ದಿನ ಅಪಾಯಕ್ಕೆ ಒಳಗಾಗಿದ್ದಾರೆ ಮತ್ತು ಸಣ್ಣ ಸಣ್ಣ ಏಟುಗಳನ್ನು ತಿಂದಿದ್ದಾರೆಯೋ ಅಂತಹವರು ಗುಣಮುಖರಾಗಿ ಮತ್ತೆ ಕೆಲಸಕ್ಕೆ ಬರಲಿ ಎಂದು ನಾನು ಹಾರೈಸುತ್ತೇನೆ. ಬಿ.ಟಿ.ಎಸ್. ಬಸ್‌ನಲ್ಲಿ ಸಾಮಾನ್ಯವಾಗಿ ಆಕ್ಸಿಡೆಂಟ್ಸ್ ಹೆಚ್ಚಿಗೆ ಆಗುವುದು ಬ್ರೇಕ್ ಫೇಲಾದಾಗ ಮಾತ್ರವೇ. ಆದೇ ರೀತಿಯಲ್ಲಿ ಇವತ್ತೂ ಸಹ ಬ್ರೇಕ್ ಫೇಲಾಗಿಯೇ ಗೀತಾಂಜಲಿ ಟಾಕೀಸ್ ಹತ್ತಿರ ಬಸ್ ಆಕ್ಸಿಡೆಂಟ್ ಆಗಿರುವುದೆಂದು ನಾನು ಭಾವಿಸುತ್ತೇನೆ ಹಿಂದೆಯೂಕೂಡ ಸಿಟಿ ರೈಲ್ವೆ ಸ್ಟೇಷನ್ ಹತ್ತಿರವೊ ಕೂಡ ಯಾವುದೋ ಒಂದು ಕಾಂಪೌಂಡಿಗೆ ಡ್ಯಾಷ್ ಆಗಿ ಮನೆಯೊಳಗೆ ನುಗ್ಗಿ ಅಲ್ಲಿ ನಿಂತಿದ್ದಂಥ ಒಬ್ಬ ಹೆಂಗಸಿಗೆ ಮಾತ್ರ ಮಂಗುವಿಗೆ ದೊಡ್ಡದಾಗಿ ಪೆಟ್ಟುಬಿದ್ದು ಕೊನೆಗೆ ಗೋಡೆಯೇ ಕುಸಿದುಬಿದ್ದಿದೆ. ಇತ್ತೀಚೆಗೆ ಸೆಂಟ್ ಮಾರ್ತಾಸ್ ಆಸ್ಪತ್ರೆಯ ಹತ್ತಿರವೂ ಇಂತಹ ಒಂದು ಆಕ್ಸಿಡೆಂಟ್ ಆಗಿದೆ. ಹೀಗೆ ಪ್ರತಿ ತಿಂಗಳಿಗೆ ಒಂದು ಎರಡು ಬಸ್ಸುಗಳು ಹೀಗೆಯೇ ಬ್ರೇಕ್ ಫೇಲ್ಯೂರ್ ಆಗಿ ಆಕ್ಸಿಡೆಂಟ್ ಆಗುತ್ತಾ ಇರುವುದನ್ನು ನಾವು ನೋಡುತ್ತಿದ್ದೇವೆ. ಆಂದಮೇಲೆ ಆಲ್ಲಿನ ಆಡಳಿತ, ಬಸ್ಸುಗಳ ಮೇಂಟಿನೆನ್ಸ್ ಸುತ್ತಾಮುತ್ತ ಕಟ್ಟಿದೆಯೆಂದ ನನ್ನ ಅಭಿಪ್ರಾಯ. ಸಾರಿಗೆ ಸಚಿವರು ಇಲ್ಲಿ ಇಲ್ಲ. ಅವರು ಇಲ್ಲಿ ಇವತ್ತು ಇದ್ದಿದ್ದರೆ ಬಹಳ ಚೆನ್ನಾಗಿರುತ್ತಿತ್ತು. ಮಾನ್ಯ ಕೈಗಾರಿಕೆಯ ಸಚಿವರ ಗಮನಕ್ಕೆ ಈ ವಿಚಾರಗಳನ್ನು ನಾನೀಗ ತರುತ್ತಿದ್ದೇನೆ. ಟ್ರಾನ್ಸ್‌ಪೋರ್ಟ್ ಇಲಾಖೆಯೂ ಸಹ ಒಂದು ಕೈಗಾರಿಕೆ ಇಲಾಖೆಯಂತಿದೆ ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಕಮಿಟಿಯವರೂ ಸಹ ಇದರ ಬಗ್ಗೆ ಈಗಾಗಲೇ ಅನೇಕಸಾರಿ ಸರ್ಕಾರದ ಗಮನವನ್ನು ಇಂತಹ ವಿಚಾರಗಳ ಬಗ್ಗೆ ಸೆಳೆದಿದ್ದಾರೆ. ನಾವೆಲ್ಲರೂ ಸಹ ಆಲ್ಲಿನ ವರ್ಕ್‌ಷಾಪ್‌ಗಳನ್ನು ನೋಡಿಕೊಂಡು ಬಂದಿದ್ದೇವೆ. ಆಲ್ಲಿಯ ಬಸ್ ಮೇಂಟಿನೆನ್ಸ್ ಏನೂ ಸರಿಯಾಗಿಲ್ಲ. ಬ್ರೆಕ್‌ಗಳನ್ನು ಸರಿಯಾಗಿ ಚೆಕ್ ಮಾಡುವ ವ್ಯವಸ್ಥೆಇಲ್ಲ ಕೆಲವು ದಿವಸಗಳ ಹಿಂದೆ ಕೆ.ಎಸ್.ಆರ್.ಟಿ.ಸಿ. ಚೇರ್‌ಮನ್ ಅವರೇ ಒಂದು ಮೀಟಿಂಗನ್ನು ಕರೆದಿದ್ದರು. ನಾನೂ ಸಹ ಆಲ್ಲಿಗೆ ಹೋಗಿದ್ದೆ. ಇಂತಹ ವಿಚಾರಗಳ ಬಗ್ಗೆ ಬಹಳ ಚೆನ್ನಾಗಿ ಮಾತನಾಡಿದ್ದೇವೆ. ನಾವು ಹೇಳಿದ ಸಲಹೆಗಳ ವಿಚಾರದಲ್ಲಿ ಸೂಕ್ತ ಗಮನವನ್ನು ಜಾಗ್ರತೆಯಾಗಿ ಸರ್ಕಾರದವರು ತೆಗೆದುಕೊಳ್ಳಬೇಕು. ಸಂಬಂಧಪಟ್ಟ ಟ್ರಾನ್ಸ್‌ಪೋರ್ಟ್ ಇಲಾಖೆಯೂ ಅವುಗಳ ಬಗ್ಗೆ ತೀವ್ರ ಗಮನವನ್ನು ಕೊಡಬೇಕು. ಈ ರೀತಿ ಬ್ರೇಕ್ ಫೇಲ್ಯೂರ್ ಆಗತಕ್ಕ ಬಸ್ಸುಗಳಿಂದ ಆಗತಕ್ಕ ಅಪಘಾತವನ್ನು ತಪ್ಪಿಸುವುದಕ್ಕೆ, ಅದರಿಂದಾಗತಕ್ಕ ನಷ್ಟಗಳನ್ನು ಹೋಗಲಾಡಿಸುವುದಕ್ಕೆ ಮತ್ತು ಅಕಸ್ಮಾತ್ತಾಗಿ ಆಗತಕ್ಕ ಸಾವುಗಳನ್ನು ತಪ್ಪಿಸುವುದಕ್ಕೆ ಸರ್ಕಾರ ಬಹಳ ಜಾಗ್ರತೆಯಾಗಿ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು ಆದರೆ ಇವತ್ತು ಸಾವನ್ನಪ್ಪಿರುವವರೆಲ್ಲರಿಗೂ ಹೆಚ್ಚಿನ ಪರಿಹಾರವನ್ನು ಕೊಡಬೇಕೆಂದು ನಾನು ಸಲಹೆಮಾಡುತ್ತೇನೆ.

† ಶ್ರೀ ಕೊಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, ಕೇವಲ ಸಂತಾಪ ಹೇಳಿ ಜೀವಕ್ಕೆ ಆಗಿರತಕ್ಕ ಅಪಾಯಕ್ಕಾಗಿ 500 ರೂಪಾಯಿಗಳನ್ನು ಕೊಟ್ಟರೆ ಸಾಕೇ ? ಮಾನ್ಯ ಶ್ರೀ ಕೃಷ್ಣನ್ ಅವರು ಕೊಟ್ಟ ಹೇಳಿಕೆಗೆ ಪೂರ್ವಕವಾಗಿ ನಾನು ಕೆಲವು ವಿಚಾರಗಳನ್ನು ಇಲ್ಲಿ ಹೇಳಬೇಕಾಗಿದೆ. ಇಲ್ಲಿ ಬಿ.ಟಿ.ಎಸ್. ಇದೆ. ಅದರೆ ರಾಜ್ಯಾದ್ಯಂತ ಕೆ.ಎಸ್.ಆರ್.ಟಿ.ಸಿ. ಬಸ್ಸುಗಳು ಎಷ್ಟೋ ಓಡಾಡುತ್ತವೆ. ನಿನ್ನೆ ಬೆಳಿಗ್ಗೆ ನಾನು ಇಲ್ಲಿಗೆ ಬರುವಾಗ ಒಂದು ದೃಶ್ಯವನ್ನು ಕಂಡೆ. ನಾಲ್ಕಾರು ಬಸ್ಸುಗಳಿಗೆ ಕಡಿವೆ ಇಲ್ಲ.

ಎಲ್ಲವೂ ಆಕ್ಸಿಡೆಂಟಾಗಿ ಬಿದ್ದಿವೆ. ಇಲ್ಲಿಂದ ಬಸ್ಸು ಬಿಡುವಾಗಾಗಲೀ ಅಲ್ಲಿಂದ ಬಸ್ಸು ಬಿಡುವಾಗಾಗಲೀ ಯಂತ್ರದ ಭಾಗಗಳೆಲ್ಲವೂ ಯಾವುದು ಸರಿಯಾಗಿವೆ, ಯಾವುದು ಸರಿಯಾಗಿಲ್ಲವೆಂಬ ಬಗ್ಗೆ ಚಿಕಪ್‌ಮಾಡುವುದನ್ನು ಪೂರ್ತಿಯಾಗಿ ಕೈಬಿಟ್ಟಿದ್ದಾರೆಂದು ನನಗೆ ತೋರುತ್ತಿದೆ. ಸರಿಯಾಗಿ ಆದರೆ ಕಡೆಗೆ ಗಮನ ಕೊಡುತ್ತಾ ಇಲ್ಲ. ಕೇವಲ ಚಕ್ರಗಳನ್ನು ಮಾತ್ರ ನೋಡಿ ಬಸ್ಸುಗಳನ್ನು ಬಿಡುತ್ತಿದ್ದಾರೆಂದು ನನಗೆ ಕಾಣುತ್ತಿದೆ. ಮತ್ತೇನೇನೂ ಇಲ್ಲ. ಈ ರಾಜ್ಯದಲ್ಲಿ ಈಗಾಗಲೇ ಖಾಸಗಿ ಬಸ್ಸುಗಳನ್ನೂ ಸಹ ಸರ್ಕಾರದವರು ತೆಗೆದುಕೊಂಡು ಅವನ್ನೆಲ್ಲಾ ಕುಲಗೆಡಿಸಿ ದಿನಕ್ಕೆ ಎಷ್ಟು ಜನರ ಪ್ರಾಣಗಳನ್ನು ಕೊಲ್ಲುವುದಕ್ಕೆ ಸಾಧ್ಯವೆಂಬುದನ್ನು ಯೋಚನೆಮಾಡುತ್ತಾ ಇರುವಹಾಗೆ ಕಾಣುತ್ತಿದೆ, ಇದು ಸರಿಯಲ್ಲ. ಯಾವಾಗಲೂ ಬಸ್ಸುಗಳನ್ನು ಡಿಪೋಗಳಿಂದ ಬಿಡುವಾಗ ಇದರ ಕಂಡೀಷನ್ಸ್ ಸರಿಯಾಗಿದೆಯೇ ಇಲ್ಲವೇ ಎಂಬುದನ್ನು ಚೆಕಪ್‌ಮಾಡಿ ನಿಜವಾಗಿ ಸರಿಯಾದ ರೀತಿಯಲ್ಲಿ ಅವನ್ನು ಬಿಡುವುದಕ್ಕೆ ತಕ್ಕ ಕ್ರಮವನ್ನು ತೆಗೆದುಕೊಳ್ಳುತ್ತಾರೋ ಇಲ್ಲವೋ ಎಂಬುದನ್ನ ಸರ್ಕಾರ ಹೇಳಬೇಕು. ಇವತ್ತು ನಿಜವಾಗಿಯೂ ಕೆ.ಎಸ್.ಆರ್.ಟಿ.ಸಿ. ಬಸ್ಸುಗಳಲ್ಲಿ ಜನಗಳು ಪ್ರಯಾಣ ಮಾಡಬೇಕೆಂದರೆ ಅವರ ಜೀವನನ್ನು ಎಡಗೈಲಿ ಹಿಡಿದುಕೊಂಡು ಹೋಗಬೇಕು. ಭಯ ಭಯ ಜನಗಳಿಗೆ ಬಂದಿದೆ. ಅದ್ದರಿಂದ ಅವುಗಳ ಸರಿಯಾದ ರಿಪೇರಿಗೆ ಬ್ರೇಕ್ ಫೇಲ್ಯೂರ್ ಕಾರಣಗಳಿಗೆ ಸರ್ಕಾರ ಹೆಚ್ಚಿನ ಗಮನಕೊಡಬೇಕು. ಒಟ್ಟಿನಲ್ಲಿ ಇವತು ಈದಿನದ ಬಸ್ಸು ಅಪಘಾತದಲ್ಲಿ ಯಾರ್ಯಾರೂ ಮಂಡಿದಿದ್ದಾರೋ ಅವರಿಗೆ ಹೆಚ್ಚಿನ ರೀತಿಯಲ್ಲಿ ಹಣಸಹಾಯ ಮಾಡಬೇಕು. ಮುಂದೆ ಜನಗಳಿಗೆ ಇವುಗಳಿಂದ ಅಂತಹ ಭಯಗಳು ಆಗದೇ ಇರುವ ಹಾಗೆ ಸೂಕ್ತ ಕ್ರಮವನ್ನು ಸಂಬಂಧಪಟ್ಟ ಇಲಾಖೆಯವರೂ ಹಾಗೂ ಸರ್ಕಾರದವರು ತೆಗೆದುಕೊಳ್ಳಬೇಕು.

† ಶ್ರೀ ಟಿ. ಆರ್. ಶಾಮಣ್ಣ (ಕೋಚ್).—ಮಾನ್ಯ ಅಧ್ಯಕ್ಷರೇ, ನಾನು ಏನೇನು ಹೇಳಬೇಕಾಗಿತ್ತೋ ಅವನ್ನೆಲ್ಲ ನನ್ನ ಮಾನ್ಯ ಸ್ನೇಹಿತರು ಈಗಾಗಲೇ ಮಾತನಾಡಿದ್ದಾರೆ. ನೊಂದವರಿಗೆ ಸಹಾನುಭೂತಿ ತೋರಿಸಂತ್ತೇವೆಂದು ಹೇಳಿದರೆ ಅದೇನೂ ಸಾಲದು. ನನಗೆ ತಿಳಿದುಬಂದ ಅನುಭವದ ಪ್ರಕಾರ ಬಿ.ಟಿ.ಎಸ್.ನಲ್ಲಿ ಬೆಳಿಗ್ಗೆ ಬಸ್ ತೆಗೆದುಕೊಳ್ಳುವಾಗ ಕೆಲವು ಫಾರ್ಮ್ಯಾಟೀಸ್ ಆಲ್ಲಿರುತ್ತವೆ. ಅಲ್ಲಿರತಕ್ಕ ಕೆಲವು ಜನ ಅಧಿಕಾರಿಗಳು ಯಾರಿದ್ದಾರೆಯೋ ಅವರಿಗೆ ಮಾಮೂಲಾಗಿ ಪ್ರಸಾದ ಕೊಟ್ಟರೇನೇ ಬಸ್ ಸರಿಯಾದ ಕಂಡೀಷನ್ ಇದೆಯೇ ಇಲ್ಲವೇ ಎಂದು ನೋಡಿ ಬಿಡುತ್ತಾರೆ. ವರ್ಕ್‌ಷಾಪಿನಲ್ಲಿದ್ದಾಗಲೇ ಸರಿಯಾದ ಚಿಕಪ್ ಮಾಡುತ್ತಾ ಇಲ್ಲ. ಅಲ್ಲಿಂದ ಬಸ್‌ಗಳನ್ನು ಕಳುಹಿಸುವಾಗ ಅವು ಸರಿಯಾದ ಕಂಡೀಷನ್ಸ್‌ನಲ್ಲಿವೆಯೇ ಇಲ್ಲವೇ ಎಂಬುದನ್ನು ಖಾತರಿ ಮಾಡಿಕೊಂಡು ಕಳುಹಿಸಬೇಕು. ಏನೇ ಆಗಲೀ ಅವನಿಗೆ ಮಾಮೂಲು ಒಟ್ಟಸಲೇಬೇಕು. ನನ್ನ ಅನುಭವದಲ್ಲಿ ಬಸ್ಸುಗಳು ಡಿಪೂ ಬಿಡುವಾಗ ಅವು ಸರಿಯಾದ ಕಂಡೀಷನ್ಸ್‌ನಲ್ಲಿವೆ ಎಂಬ ಬಗ್ಗೆ ಸರಿಯಾಗಿ ಚಕ್ ಮಾಡುವ ವ್ಯವಸ್ಥೆ ಇಲ್ಲ. ಇತ್ತೀಚೆಗೆ ಬಿ.ಟಿ.ಎಸ್. ಬಸ್ಸುಗಳು ಬಹಳ ಜಾಸ್ತಿಯಾಗಿ ಅಪಘಾತಕ್ಕೆ ಈಡಾಗುತ್ತಿವೆ. ಆಕ್ಸಿಡೆಂಟ್ಪ್ ಪದೇಪದೇ ಇತ್ತೀಚೆಗೆ ಅನೇಕ ಕಡೆಕಳಲ್ಲಿ ಆಗುತ್ತಲೇ ಇವೆ. ಅಂಥಾದ್ದಕ್ಕೆ ಸಂಬಂಧಪಟ್ಟ ಇಲಾಖೆ ಅವಕಾಶವನ್ನು ಕೊಡುತ್ತಿದೆ. ಆದ್ದರಿಂದ ಇನ್ನು ಮುಂದಾದರೂ ಹೆಚ್ಚಿಗೆ ಆಸಕ್ತಿ, ಶ್ರದ್ಧೆ ವಹಿಸಿ ಡಿಪೋಗಳಿಂದ ಬಸ್ಸುಗಳನ್ನು ಬಿಡುವಾಗ ಸಾಕಷ್ಟು ಚಿಕಪ್ ಮಾಡಬೇಕೆಂದೂ, ಅದಕ್ಕೆ ತಕ್ಕ ವ್ಯವಸ್ಥೆಗಳನ್ನು ವ್ಯಕ ಪಡಿಸ ಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಂಗಿಸುತ್ತೇನೆ.

† ಶ್ರೀ ಎಸ್. ಎಂ. ಕೃಷ್ಣ.—ಮಾನ್ಯ ಅಧ್ಯಕ್ಷರೇ, ಈಗ ಸದನದಲ್ಲಿ ಮಾತನಾಡಿದ ಮಾನ್ಯ ಸದಸ್ಯರುಗಳ ಅಭಿಪ್ರಾಯಂವನ್ನು ಸಂಪೂರ್ಣವಾಗಿ ನಾನು ಒಪ್ಪುತ್ತೇನೆ. ನಮ್ಮ ಜನಗಳು ಪ್ರಯಾಣ ಮಾಡುವಾಗ ಅವರು ಪ್ರಯಾಣಮಾಡುವ ಬಸ್ಸುಗಳು ಪ್ರಯಾಣಕ್ಕೆ ಯೋಗ್ಯವಾದ ರೀತಿಯಲ್ಲಿ ಚಕ್ರಗಳು, ಬ್ರೆಕು, ಸ್ಟೀರಿಂಗ್ ಮತ್ತು ಇತರೆ ಟಾಪ್-ಟು-ಬಾಟಮ್ ಸರಿಯಾದ ರೀತಿಯಲ್ಲಿ ಇರಬೇಕೆಂಬುದಲ್ಲಿ ಈ ಸದನದಲ್ಲಿ ಎರಡು ಅಭಿಪ್ರಾಯಗಳು ಇಲ್ಲವೇ ಇಲ್ಲ ಅದರೆ ಅಪಘಾತವಿಲ್ಲದೆ ವಾಹನಗಳನ್ನು ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ. ಅಪಘಾತಗಳು ಆಗುತ್ತವೆ ? ಕಾರಣ ಏನು ಎನ್ನುತಕ್ಕಂಥಾದ್ದನ್ನು ವಿಚಾರಮಾಡಬೇಕು ಇದನ್ನು ನನ್ನ ಸಹೊದ್ಯೋಗಿಗಳಾದ ಮಾನ್ಯ ಮಹಮದ್ ಆಲಿಯವರ ಗಮನಕ್ಕೆ ತಂದು ತಮ್ಮ ಸಲಹೆಗಳನ್ನು ಸಹ ಅವರ ಗಮನಕ್ಕೆ ಕಳುಹಿಸಿಕೊಡುತ್ತೇನೆ, ಮಾನ್ಯ ಲಿಂಗಪ್ಪನವರು ಐದು ನೂರು ರೂಪಾಯಿ ಕೊಟ್ಟರೆ ಸಾಕೇ ಎಂದು ಕೇಳಿದರು ಅದು ಕೇವಲ ಸಣ್ಣಪ್ರಮಾಣ ಗಾಯಂಗಳಾಗಿ ನೊಂದವರಿಗೆ ಎಕ್ಸ್‌ಗ್ರೇಷಿಯಾ ಪೇಮೆಂಟ್ ಎಂದುಕೊಡುವುದು ಅಷ್ಟೆ. ಅವರು ಮತ್ತೆ ಕೆಲಸಕ್ಕೆ ವಾಪಸ್ ಬರುವವರಿದ್ದಾರೆ. ಯಾರು ಗತಿಸಿಹೋಗಿದ್ದಾರೆ ಮತ್ತು ತೀವ್ರವಾದ ರೀತಿಯಲ್ಲಿ ಗಾಯಗೊಂಡಿದ್ದಾರೆ. ಅವರ ಬಗ್ಗೆ ತೀವ್ರವಾದ ರೀತಿಯಲ್ಲಿ ಆಲೋಚನೆಮಾಡಬೇಕು. ಅದಕ್ಕೆ ರೂಲ್ಸ್‌ಗಳು ಇವೆ ಅದರ

ಪ್ರಕಾರ ಮಾಡಬೇಕಾಗುತ್ತದೆ. ಮಾನ್ಯ ಕೃಷ್ಣನ್‌ರವರಿಗೆ ಗೊತ್ತಿದೆ. ಸ್ಯಾಚುಟರಿ ಅಬ್ಲಿಗೇಷನ್ ಏನು ಏನು ಇದೆ ಅನ್ನುವುದು. ಮ್ಯಾನೇಜಮೆಂಟ್‌ನವರು ಇವೆಲ್ಲವನ್ನು ನೋಡಿ ಪರಿಹಾರ ರೂಪದಲ್ಲಿ ಕೊಡುತ್ತಾರೆ ತತ್‌ಕ್ಷಣ ಅನುಕೂಲವಾಗಲಂ ಈ ಹಣವನ್ನ ಕೊಟ್ಟಿದ್ದಾರೆ. ಈ ಸದನದ ಪರವಾಗಿ ನಮ್ಮ ದುಃಖವನ್ನು ಮೃತರ ಬಂಧುಗಳಿಗೆ ತಿಳಿಸಬೇಕಂ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

KARNATAKA CO-OPERATIVE SOCIETIES (2nd AMENDMENT) BILL, 1976

Motion to Consider (Debate Continued)

ಅಧ್ಯಕ್ಷರಂ.—ನಿನ್ನೆದಿವಸ ಮಾನ್ಯ ಉಪಾಧ್ಯಕ್ಷರು ಇವತ್ತು ಈ ಬಿಲ್ಲಿನ ಮೇಲೆ ರಿಪ್ಲೈ ಮಾಡಬೇಕೆಂದು ಹೇಳಿದ್ದಾರೆ.

ಶ್ರೀ ಟಿ. ಆರ್. ಶಾಮಣ್ಣ.—ನನಗೆ ಈ ಬಿಲ್ಲಿನ ಮೇಲೆ ಎರಡಂ ಮಾತನಾಡಲು ಅವಕಾಶ ಕೊಡ ಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಎಚ್. ರಂಗನಾಥ.—ಮತ್ತೆ ನನ್ನದೆ ಆದ ಸಹಕಾರ ಸಂಘದ ನಾಲ್ಕನೇ ಅಮೆಂಡ್‌ಮೆಂಟ್ ಬರುತ್ತಿದೆ. ಅವರ ಮೇಲೆ ಮಾನ್ಯ ಶಾಮಣ್ಣನವರು ಮಾತನಾಡಬಹುದು.

ಅಧ್ಯಕ್ಷರು.—ಈಗ ಆಗುವುದಿಲ್ಲ, ಮುಂದೆ ಸಮಯ ಸಿಕ್ಕುತ್ತದೆ ಆಗ ಮಾನ್ಯ ಶಾಮಣ್ಣನವರಂ ಮಾತನಾಡಬಹುದು.

† ಶ್ರೀ ಕೆ ಎಚ್. ರಂಗನಾಥ್.—ಸನ್ಮಾನ್ಯ ಅಧ್ಯಕ್ಷರೇ, ಈ ಸಹಕಾರ ಸಂಘದ ಕಾಯಿದೆಗೆ ತಂದಿರತಕ್ಕಂಥ ೨ನೇ ತಿದ್ದುಪಡಿ ಬಗ್ಗೆ ಒಬ್ಬ ಸದಸ್ಯರ ವಿನಃ ಇನ್ನುಳಿದ ಸದಸ್ಯರೆಲ್ಲರೂ ಅವರ ಉದ್ದಿಶ್ಯ ವನ್ನು ಸ್ವಾಗತಮಾಡಿದ್ದಾರೆ· ಮಾನ್ಯ ಪುಟ್ಟಸ್ವಾಮಿಯವರಂ ೨ ವಿಚಾರಗಳನ್ನು ಪ್ರಸ್ತಾಪಮಾಡಿದ್ದಾರೆ, ಅದರಲ್ಲಿ ಉದ್ದೇಶಗಳನ್ನು ಸ್ವಾಗತಮಾಡುತ್ತಾ ಕಾರ್ಯಗತಮಾಡುವಾಗ ಅದರಲ್ಲೂ ಕೂಡ ಸೆಕ್ಷನ್ ೧೪ರಲ್ಲಿ ಪುನರ್ ರಚನೆ ಮಾಡುವಾಗ ನಾಮಕರಣ ಮಾಡುವುದು ಏನಿದೆ ಅದರ ಬಗ್ಗೆ ಹೆಚ್ಚು ಜನ ಪ್ರಸ್ತಾಪಮಾಡಿದ್ದಾರೆ. ಇನ್ನು ಮಂಲೆನಾಡಿನಿಂದ ಬಂದಂತಹ ಜನ ಮತ್ತು ಮೈದಾನ ಪ್ರದೇಶದಿಂದ ಬುದಂತಹ ಜನ ಒಂದೊಂದು ರೀತಿಯಲ್ಲಿ ಪ್ರಸ್ತಾಪಮಾಡಿದ್ದಾರೆ ಪುನರ್ ರಚನೆ ಮಾಡುವಾಗ ಒಂದಕ್ಕೊಂದು ಸೊಸೈಟಿಯನ್ನು 10 ಕಿಲೋಮೀಟರ್ ದೂರದವರಿಗೂ ಮಾಡಿದ್ದೀರಿ ಅದು ಹೇಗೆ ? ಎನ್ನುವ ಅಭಿಪ್ರಾಯಂ ವ್ಯಕ್ತಮಾಡಿದ್ದಾರೆ. ಮತ್ತೆ ಕೆಲವರು ಒಳ್ಳೆಯ ಸೊಸೈಟಿಗಳನ್ನು ಲಿಕ್ವಿಡೇಷನ್ ಆಗಿರುವಂತಹ ಸೊಸೈಟಿಗಳಿಗೆ ಸೇರಿಸಿದ್ದೀರಿ ಎಂದು ಕೆಲವರು ಹೇಳಿದ್ದಾರೆ ಅಷ್ಟೇ ಅಲ್ಲದೆ ಅದಕ್ಕೆ ಕಾರಣರಾಗಿದ್ದವರನ್ನು ಕೂಡ ತಾವು ಮತ್ತೆ ನಾಮಕರಣ ಮಾಡಿದ್ದೀರಿ ಎಂದಂ ತಿಳಿಸಿದ್ದಾರೆ. ಇದು ಕೆಲವಾರಂ ಕಡೆ ಆಗಿದೆ ಅದಂ ನನ್ನ ಗಮನಕ್ಕೂ ಕೂಡ ಬಂದಿದೆ. ಇದನ್ನು ಯಾವರೀತಿ ಬಗೆಹರಿಸಬೇಕೆನ್ನುವುದು ಒಂದಂ ವಿಚಾರ. ಡಿಫಂಕ್ಟ್ ಸೊಸೈಟಿಗಳ ಹೆಡ್‌ಕ್ವಾರ್ಟರ್ಸ್ ಇದ್ದಕಡೆಯಲ್ಲೇ ಇಡಬೇಕಾದ ಪರಿಸ್ಥಿತಿ ಬರುತ್ತದೆ. ಡಿಫಂಕ್ಟ್ ಆಯಿತು ಎಂದಂ ಬೇರೆ ಕಡೆಗೆ ಸೇರಿಸುವುದಕ್ಕೆ ಸಾಧ್ಯವಿಲ್ಲ ಹೆಡ್‌ಕ್ವಾರ್ಟರ್ಸ್ ಚೇಂಜ್ ಮಾಡುವುದರಿಂದ ಯಾವ ವ್ಯತ್ಯಾಸವೂ ಆಗ ವುದಿಲ್ಲ. ಒಳ್ಳೆಯ ಸೊಸೈಟಿ ಒಂದು ಮೂಲೆಯಲ್ಲಿ ಇರಬಹುದು. ಇನ್ನು ಪುನರ್ ವಿಂಗಡಿಸಿಮಾಡುವಾಗ ಸೆಕ್ಷನ್ 14 ಮತ್ತು 14(ಎ) ಕಾನೂನಿನಲ್ಲಿ ಕಾಯಿಂ ಆಗಿ ಇರುತ್ತದೆ ಸೆಕ್ಷನ್ (14)ಎ ಕಾನೂನಿಂದ ಹೊರಗೆ ಹೋಗುವುದಿಲ್ಲ. ರಿಜಿಸ್ಟ್ರಾರ್ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಅವಕಾಶ ಇರುತ್ತದೆ. ಸರ್ಕಾರಕ್ಕೂ ಕೂಡ ಕ್ರಮ ತೆಗೆದುಕೊಳ್ಳುವುದಕ್ಕೆ ಹಕ್ಕು ಇರುತ್ತದೆ ಆದರಿಂದ ಈ ಸಭೆಗೆ ಹೇಳಲಿಕ್ಕೆ ಇಷ್ಟಪಡುತ್ತೇನೆ. ನಾಮಿನೇಷನ್ ಬಗ್ಗೆ ತೀವ್ರವಾಗಿ ಪ್ರಸ್ತಾಪಮಾಡಿದ್ದಾರೆ, ಡಿಪಾಲ್ಟ್‌ರ್ಸ್‌ನ್ನು ಪುನಃ ನಾಮಕರಡಿ ಮಾಡಿದ್ದಾರೆ ಕೆಲವರು ಸತ್ತವನನ್ನು ನಾಮಂಕರಣ ಮಾಡಿದ್ದಾರೆ ಜೊತೆಗೆ ಇದೇ ಉದ್ಯೋಗ ಮಾಡಿಕೊಂಡಿದ್ದಾರೆಂದು ಕೂಡ ಹೇಳಿದ್ದಾರೆ.

ಶ್ರೀ ಸಿ. ಬೈರೇಗೌಡ.—ಸತ್ತವರನ್ನು ನಾಮಂಕರಣ ಮಾಡಿದ್ದಾರೆಂದು ಅಲ್ಲ. ಎಲ್ಲೋ ಎಲ್ಲೋ ಇದ್ದವರನ್ನು ಒಳಗೆ ಸೇರಿಸಿ ನಾಮಕರಣ ಮಾಡಿದ್ದಾರೆಂದು.